ಊ. ಕಾವೇರಿ ಮತ್ತು ಆಲಮಟ್ಟಿ ಅಣೆಕಟ್ಟಿನ ವಿಚಾರದಲ್ಲಿ ಸಚಿವರು ಹೇಳಿಕೆ ನೀಡುವ ಬಗ್ಗೆ.

ಶ್ರೀ ಹೆಚ್.ಎನ್. ನಂಜೇಗೌಡ:- ಮಾನ್ಯ ಅಧ್ಯಕ್ಷರೆ, ಒಂದು ಸ್ಪಷ್ಟೀಕರಣವನ್ನು ನಾನು ಸರ್ಕಾರದಿಂದ ನಿರೀಕ್ಷಿಸಿದ್ದೆ. ಅಧಿವೇಶನ ಸೇರಿದ ಮೂರನೇ ದಿವಸ ಇದಾಗಿದೆ. ನಿನ್ನೆ ದಿವಸವೇ ರಾಜ್ಯದ ಎರಡು ಪ್ರಮುಖ ಸಮಸ್ಯೆಗಳಾಗಿರುವ ಕಾವೇರಿ ಮತ್ತು ಆಲಮಟ್ಟಿ ಅಣೆಕಟ್ಟಿನ ಬಗ್ಗೆ ಒಂದು ಹೇಳಿಕೆ ಮಾಡುತ್ತೀರೆಂದು ನಿರೀಕ್ಷಿಸಿದ್ದೆ. ವಾಲಂಟರಿಯಾಗಿ ಹೇಳಿಕೆ ಮಾಡುವುದಾದರೆ ಸಂತೋಷ. ಇಂತಹ ಪ್ರಮುಖ ವಿಚಾರಗಳ ಬಗ್ಗೆ ಏನೇನು ಡೆವಲಪ್‌ಮೆಂಟ್‌ಗಳಾದವು? ಮಾತುಕತೆ ಏಕೆ ವಿಫಲವಾಯಿತು? ಮೊದಲೇ ಏಕೆ ಭುಜ ತಟ್ಟಿಕೊಂಡಿರಿ? ಈ ಕುರಿತು ಚರ್ಚೆ ಮಾಡುವುದಕ್ಕೋಸ್ಕರ ಅಧಿವೇಶನ ಕರೆಯಬೇಕೆಂದು ನಾನು ಹೇಳಿದ್ದೆ. ಅಧಿವೇಶನ ಸೇರಿರುವ ಈ ಸಂದರ್ಭದಲ್ಲಾದರೂ ಆಲಮಟ್ಟಿ ಅಣೆಕಟ್ಟಿನ ಹಾಗೂ ಕಾವೇರಿ ವಿಚಾರದಲ್ಲಿ ಸರ್ಕಾರ ವಾಲಂಟರಿಯಾಗಿ ಒಂದು ಹೇಳಿಕೆ ಮಾಡಬೇಕೆಂದು ನಾನು ನಿರೀಕ್ಷಿಸುತ್ತೇನೆ. ನಾವು ಹೇಳಿಕೆ ಮಾಡುವುದಿಲ್ಲ. ನಿಮಗೆ ತಿಳಿದಂತೆ ಮಾಡಿ ಎಂದರೆ ನಾವೆಲ್ಲಾ ಕುಳಿತುಕೊಂಡು ಆ ಕುರಿತು ಆಲೋಚಿಸುತ್ತೇವೆ.

ಶ್ರೀ ವಾಟಾಳ್ ನಾಗರಾಜ್:- ನಾನು ಈಗಾಗಲೇ ಕೇಳಿರುವಂಥಾದ್ದಕ್ಕೆ ಉತ್ತರ ಬರಲಿಲ್ಲ. ಅದರ ಬಗ್ಗೆ ಸರ್ಕಾರದ ನಿಲುವೇನು?

ಶ್ರೀ ಸಿದ್ಧರಾಮಯ್ಯ:- ಗಡಿ ವಿಚಾರದ ಬಗ್ಗೆ ಅಧ್ಯಕ್ಷರು ಈಗಾಗಲೇ ಹೇಳಿದಂತೆ ಈ ಸದನದಲ್ಲಿ ಮಹಾಜನ್ ವರದಿ ಬಗ್ಗೆ ಬಹಳಷ್ಟು ಸಲ ಚರ್ಚೆಯಾಗಿದ್ದು ಒಂದು ನಿರ್ಣಯವನ್ನು ಕೂಡ ಅಂಗೀಕರಿಸಲಾಗಿದೆ. ಸರ್ಕಾರದ ನಿಲುವಂತೂ ಬಹಳ ಸ್ಪಷ್ಟವಾಗಿದೆ, ಅದು ಮುಗಿದಂಥ ಕಥೆ. ಬೆಳಗಾಂ ಕರ್ನಾಕಟದ್ದು, ಅದರ ಬಗ್ಗೆ ಬೇರೆ ಯಾರೂ ಕೂಡ ತಕರಾರು ಎತ್ತುವುದಕ್ಕೆ ಸಾಧ್ಯವಿಲ್ಲ. ಮಹಾಜನ್ ವರದಿಯೇ ಅಂತಿಮ, ಅದು ಜಾರಿಯಾಗಬೇಕು, ಅದರಲ್ಲಿ ಬೇರೆ ಬದಲಾವಣೆಯಾಗುವುದಕ್ಕೆ ಸಾಧ್ಯವಿಲ್ಲವೆನ್ನುವುದು ಸರ್ಕಾರದ ನಿಲುವಾಗಿದೆ.

ಅಧ್ಯಕ್ಷರು:- ನೀರಿನ ವಿಚಾರದಲ್ಲಿ ಸರ್ಕಾರ ಸ್ವಯಂಪ್ರೇರಿತವಾಗಿ ಹೇಳಿಕೆ ಮಾಡುತ್ತದೆಯೇ? ಅಥವ ಇಲ್ಲವೇ? ಎಂಬುದನ್ನು ಹೇಳಬೇಕು.

ಶ್ರೀ ವಾಟಾಳ್ ನಾಗರಾಜ್:- ಸರ್ವ ಪಕ್ಷಗಳ ನಿಯೋಗದ ಬಗ್ಗೆ ನೀವು ಏನು ಹೇಳುತ್ತೀರಿ?

ಶ್ರೀ ಸಿದ್ಧರಾಮಯ್ಯ:- ಅದರ ಬಗ್ಗೆ ಅಗತ್ಯವಿದ್ದರೆ ಚರ್ಚಿಸೋಣ. ಕಾವೇರಿ ಮತ್ತು ಆಲಮಟ್ಟಿ ವಿಚಾರದಲ್ಲಿ ಈಗಾಗಲೇ ಸರ್ವ ಪಕ್ಷಗಳನ್ನೂ ಕರೆದು ಸರ್ಕಾರ ಚರ್ಚಿಸಿ ಮಾತುಕತೆಯಾಗಿರುವ ಬಗ್ಗೆ ಪ್ರಸ್ತಾಪಿಸಿದ್ದಾರೆ. ವಿಧಾನ ಸಭೆಯಲ್ಲಿ ಮತ್ತು ಹೊರಗಡೆ ಸಹ ಕಾವೇರಿ ವಿಚಾರವಾಗಿ ಚರ್ಚಿಸಿದ್ದೇವೆ. ಈ ಕುರಿತು ಇನ್ನೊಂದು ಬಾರಿ ಹೇಳಿಕೆ ಕೊಡಬೇಕೆಂದರೆ ಸರ್ಕಾರ ಕೊಡುತ್ತದೆ.

ಅಧ್ಯಕ್ಷರು:- ಅವರ ಅಭಿಪ್ರಾಯವೇನೆಂದರೆ, ಮಾನ್ಯ ಹಿರಿಯ ಸದಸ್ಯರಾದ ನಂಜೇಗೌಡರು ಹೇಳುವುದು ಅಥವಾ ನಾಯಕರು ಹೇಳುವುದಿಷ್ಟೆ: ಕಳೆದ ಆರು ತಿಂಗಳುಗಳಿಂದ ಅಧಿವೇಶನ ಕರೆದಿಲ್ಲ, ಈ ಮಧ್ಯಂತರ ಅವಧಿಯಲ್ಲಿ ಸಾಕಷ್ಟು ಬೆಳವಣಿಗೆಗಳಾಗಿವೆ, ಈಗಾಗಲೇ ಸರ್ಕಾರ

ಸ್ವಯಂಪ್ರೇರಿತವಾಗಿ ಒಂದು ಹೇಳಿಕೆ ಮಾಡಬೇಕಾಗಿತ್ತು, ಹೇಳಿಕೆ ಮಾಡುತ್ತದೆಂದು ನಾವು ನಿರೀಕ್ಷಿಸಿದ್ದೆವು, ಈಗಲಾದರೂ ಹೇಳಿಕೆ ಮಾಡುವ ನಿರೀಕ್ಷೆಯಲ್ಲಿದ್ದೀರಾ? ಇಲ್ಲದಿದ್ದರೆ ನಾವೇ ಅದನ್ನು ಪ್ರಸ್ತಾಪಿಸಬೇಕೇ? ಎಂದು ಕೇಳಿದರು.

ಶ್ರೀ ಸಿದ್ಧರಾಮಯ್ಯ:- ಸರ್ಕಾರ ಆ ಕುರಿತು ಹೇಳಿಕೆ ಮಾಡುತ್ತದೆ.

ಅಧ್ಯಕ್ಷರು:- ಹಾಗಾದರೆ, ಸಮಸ್ಯೆ ಬಗೆಹರಿಯಿತು. ಈಗ ವಿದ್ಯುಚ್ಛಕ್ತಿಗೆ ಸಂಬಂಧಿಸಿದಂತೆ ಚರ್ಚೆ ಪ್ರಾರಂಭಿಸೋಣ.

7. **ನಿಯಮ 69ರ ಮೇರೆಗೆ ಚರ್ಚೆ**

ವಿಷಯ:- ಅನಧಿಕೃತ ಪಂಪುಸೆಟ್ಟುಗಳಿಗೆ ಬಳಸುತ್ತಿದ್ದ ವಿದ್ಯುತ್ತನ್ನು ಸಕ್ರಮ-ಗೊಳಿಸುವುದು ಹಾಗೂ ವಿದ್ಯುತ್ ಮೀಟರ್ ಠೇವಣಿ ಕುರಿತು.

+ ಶ್ರೀ ವೈ. ರಾಮಕೃಷ್ಣ:- ನಿಯಮಾನುಸಾರ ನಿಲುವಳಿ ಸೂಚನೆಗೆ ನನ್ನ ಪ್ರಸ್ತಾವ ತೆಗೆದುಕೊಳ್ಳಬೇಕೆಂದು ಸೂಚನೆ ಕಳುಹಿಸಿದ್ದು ನಿಲುವಳಿ ಸೂಚನೆಯಾಗಿ ತೆಗೆದುಕೊಳ್ಳುವುದ-ಕ್ಕಾಗುವುದಿಲ್ಲವೆಂದು ತಾವು ನನಗೆ ಉತ್ತರ ಬರೆದಿದ್ದೀರಿ. ಮತ್ತು ಅದನ್ನು ಗಮನ ಸೆಳೆಯುವ ಸೂಚನೆಯಾಗಿ ಸ್ವೀಕರಿಸಿದ್ದೀರಿ. ಈಗ ತಾವು ಯಾರಿಗೆ ಮೊದಲು ಆದ್ಯತೆ ಕೊಡುತ್ತೀರಿ?

MR. SPEAKER:- We are again converting this under rule 69 matter of urgent public importance.

ಶ್ರೀ ವೈ. ರಾಮಕೃಷ್ಣ:- ಇದು ನಮ್ಮ ಪಕ್ಷದ ವತಿಯಿಂದ ಮೂವ್ ಮಾಡಿರುವ ವಿಷಯವಾಗಿರುವುದರಿಂದ ನನಗೆ ನೀವು ಮೊದಲು ಮಾತನಾಡಲು ಅವಕಾಶ ಮಾಡಿಕೊಡಬೇಕು. Let the rule be followed.

ಅಧ್ಯಕ್ಷರು:- ನಿಮಗೆ ಅವಕಾಶ ಕೊಟ್ಟೇ ಕೊಡುತ್ತೇನೆ.

ಶ್ರೀ ವೈ. ರಾಮಕೃಷ್ಣ:- ಅಧ್ಯಕ್ಷರೆ, Let the rule be followed. ನಾನು ಸೂಚನೆ ಕಳುಹಿಸಿದ್ದುದು, ನೀವು ನನಗೆ ಅದರ ಎಂಡಾರ್ಸ್‌ಮೆಂಟ್ ಕೊಟ್ಟಿದ್ದೀರಿ. ನಾನು ನಿನ್ನೆಯೇ ಪ್ರಸ್ತಾಪಿಸಬೇಕೆಂದಿದ್ದೆ, ಆದರೆ, ಬಿಡದಿ ಬಳಿಯ ಹೆಜ್ಜಾಲದಲ್ಲಿ ಗೋಲಿಬಾರ್ ಪ್ರಕರಣವನ್ನು ಪ್ರಸ್ತಾಪಿಸಲು ತಾವು ಆದ್ಯತೆ ಕೊಟ್ಟಿದ್ದರಿಂದ ನಾನು ಕುಳಿತುಕೊಂಡೆ.

ಅಧ್ಯಕ್ಷರು:- ಮಾನ್ಯ ರಾಮಕೃಷ್ಣರವರೆ, ತಾವು ನಿಲುವಳಿ ಸೂಚನೆಗೆ ನೋಟೀಸ್ ಕಳುಹಿಸಿಕೊಟ್ಟಿದ್ದೀರಿ. ನಾನು ಹೇಳಿದೆ ಇದನ್ನು ನಿಲುವಳಿ ಸೂಚನೆಯಾಗಿ ತೆಗೆದುಕೊಳ್ಳಲು ಆಗುವುದಿಲ್ಲ, ಗಮನ ಸೆಳೆಯುವ ಸೂಚನೆಯಾಗಿ ತೆಗೆದುಕೊಳ್ಳುತ್ತೇನೆಂದು. ನೀವು (ಬಿಜೆಪಿ) ಈ ಸದನದಲ್ಲಿ ಒಟ್ಟಾರೆ 40 ಜನ ಸದಸ್ಯರಿದ್ದೀರಿ, ಅವರು (ಕಾಂಗ್ರೆಸ್) ಸಹ ಸದಸ್ಯರುಗಳನ್ನು ಸೇರಿಸಿಕೊಂಡು 45 ಜನ ಸದಸ್ಯರಿದ್ದಾರೆ, ಇದನ್ನು ಗಮನ ಸೆಳೆಯುವ ಸೂಚನೆಯಾಗಿ ತೆಗೆದುಕೊಳ್ಳುವುದು ಬೇಡವೆಂದು ಇಷ್ಟೂ ಜನರು ಹೇಳುತ್ತಿದ್ದಾರೆ.